**ದಿನಾಂಕಃ 01.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಾನು ಈ ಮುಂಚೆ ಪತ್ರಕರ್ತ ಎಂದರೆ ಸರಿ. ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತೇನೆಂದರೆ ಸರಿಯಲ್ಲ. ನನ್ನ ಹೆಂಡತಿ ಮಕ್ಕಳು ಅಲ್ಲಿ ವಾಸ ಮಾಡುತ್ತಾರೆಂದು ನುಡಿಯುತ್ತಾರೆ. ನನ್ನ ತಾಯಿ ವಾದಿಯ ಅಕ್ಕ ಎಂದರೆ ಸರಿ. ದಾರಿಯ ಸಂಬಂಧ ಪ್ರಸ್ತುತ ದಾವೆ ನಡೆಯುತ್ತಿದೆ. 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ಜಮೀನನ್ನು ಮಾರಾಟ ಮಾಡಿದ ಬಗ್ಗೆಯೂ ಸಹ ದಾವೆ ನಡೆಯುತ್ತಿದೆ. ನನ್ನ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನಗೆ ಅದರ ಬಗ್ಗೆ ಮಾಹಿತಿ ಇರುತ್ತದೆ. ವಾದಿಯ ಜಮೀನಿಗೆ ಓಡಾಡಲು ಪ್ರತಿವಾದಿಗಳು ಅಡ್ಡಪಡಿಸುತ್ತಿದ್ದಾರೆಂದು ದಾವೆ ಹಾಕಿದ್ದಾರೆಂದರೆ ಸರಿ. ವಾದ ಪತ್ರದಲ್ಲಿರುವ ಅಂಶಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ದಾರಿಯ ಸಂಬಂಧ ದಾವೆ ಹಾಕಿರುತ್ತಾರೆಂದು ನುಡಿಯುತ್ತಾರೆ. ವಾದಿಯು 2ನೇ ಪ್ರತಿವಾದಿ ದಾರಿ ಬಿಡುತ್ತಿಲ್ಲವೆಂದು ಹಾಗೂ 1ನೇ ಪ್ರತಿವಾದಿ ಭಾಗ ಕೊಡದೇ 2ನೇ ಪ್ರತಿವಾದಿಗೆ ಮಾರಾಟ ಮಾಡಿರುವುದಾಗಿ ದಾವೆ ಹಾಕಿರುತ್ತಾರೆ.

2. ಸರ್ವೆ ನಂ.82/1 ನನ್ನ ತಾಯಿಗೆ ಸೇರಿರುತ್ತದೆ. 82/2, 82/3, 82/1 ಮತ್ತು 82/5 ಇವುಗಳು ನಟರಾಜು ಹಾಗೂ ಅವರ ಕುಟುಂಬಕ್ಕೆ ಸೇರಿರುತ್ತವೆ. ಸದರಿ ನಂಬರ್ ಗಳಲ್ಲಿ ಎಷ್ಟು ವಿಸ್ತೀರ್ಣಕ್ಕೆ ಇವೆ ಎಂಬುದಾಗಿ ನನಗೆ ಹೇಳಲಾಗುವುದಿಲ್ಲ. ಸಾಕ್ಷಿಯು ಪೋಡಿಗಳಾಗಿ ಬದಲಾವಣೆಯಾಗಿವೆ ಎಂದು ನುಡಿಯುತ್ತಾರೆ. ಹುಣಸನಹಳ್ಳಿ ಕೋಡಿಹಳ್ಳಿ ರಸ್ತೆಯು ಜಮೀನಿನ ಉತ್ತರಕ್ಕೆ ಬರುತ್ತದೆ. ಸಾಕ್ಷಿಯು ಮುಂದುವರಿದು ಅದು ದಕ್ಷಿಣಕ್ಕೆ ಬರುತ್ತದೆಂದು ನುಡಿಯುತ್ತಾರೆ. ಸರ್ಕಾರಿ ರಸ್ತೆಯು ಪೂರ್ವದಿಂದ ಪಶ್ಚಿಮ ದಿಕ್ಕಿಗೆ ಹೋಗುತ್ತದೆಂದರೆ ಸರಿ. ಸದರಿ ಸರ್ಕಾರಿ ರಸ್ತೆಯಿಂದ ದಾವಾ ಸ್ವತ್ತಿನ ಮಧ್ಯೆ ಬೇರೆಯವರ ಜಮೀನುಗಳು ಇವೆ ಎಂದರೆ ಸಾಕ್ಷಿಯು ಕೇವಲ ನಟರಾಜು, ನಾಗರಾಜು ಹಾಗೂ ನಮ್ಮ ಜಮೀನು ಇರುತ್ತವೆಂದು ನುಡಿಯುತ್ತಾರೆ. ಅಲ್ಲಿ ಬೇರೆಯವರ ಜಮೀನುಗಳು ಬರುತ್ತವೆಂದರೆ ಸರಿಯಲ್ಲ.

3. 1ನೇ ಪ್ರತಿವಾದಿ ಇದ್ದ 1 ಎಕರೆ ಜಮೀನನ್ನು 2ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದರೆ ಸರಿ. ಅದರಂತೆ 2ನೇ ಪ್ರತಿವಾದಿ ಸ್ವಾಧೀನ ಹೊಂದಿದ್ದು ಖಾತೆ ಮಾಡಿಸಿಕೊಂಡಿದ್ದಾರೆಂದರೆ ಸರಿ. ಬಿ ಷೆಡ್ಯೂಲ್ ದಾವಾ ಸ್ವತ್ತಿನ ಚಕ್ಕುಬಂದಿ ವಾದಿಗೆ ಸೇರಿರುತ್ತವೆಂದರೆ ಸರಿ. ನನ್ನ ಅಜ್ಜಿ ಗುರುಸಿದ್ದಮ್ಮರವರು ಧ್ಯಾವಲಿಂಗಮ್ಮ ಹಾಗೂ ಸುರೇಶ್ ಇವರ ಹೆಸರುಗಳಲ್ಲಿ ವಿಲ್ ಮಾಡಿದ್ದು ನಂತರ ಅದರಂತೆ ಅವರುಗಳು ಸ್ವಾಧೀನದಲ್ಲಿದ್ದರು. ವಾದಿಯು ಕೂಡ ಪ್ರತ್ಯೇಕವಾಗಿ ಖಾತೆ ಮಾಡಿಸಿಕೊಂಡಿದ್ದಾರೆಂದರೆ ಸಾಕ್ಷಿಯು ಹೆಂಡತಿಯ ಹೆಸರಿಗೆ ಇದ್ದ ಆಸ್ತಿಯನ್ನು ಮಾಡಿಸಿಕೊಂಡಿದ್ದಾರೆಂದು ನುಡಿಯುತ್ತಾರೆ. ವಿಲ್ ಅವರ ಹೆಂಡತಿಯ ಹೆಸರಿನಲ್ಲಿ ಆಗಿದ್ದು ನಂತರ ಅವರು ತೀರಿಕೊಂಡಿದ್ದು ತದನಂತರ ವಾದಿಯ ಹೆಸರಿಗೆ ಬಂದಿರುತ್ತದೆ. ಸದರಿ ಗುರುಸಿದ್ದಮ್ಮರವರಿಗೆ 1ನೇ ಪ್ರತಿವಾದಿಯ ತಾಯಿ ಮಗಳಾಗುತ್ತಾರೆ. ವಾದಿಯು ತನ್ನ ಸ್ವತ್ತಿನಲ್ಲಿ ತೆಂಗಿನ ಮರಗಳನ್ನು ಹಾಕಿಸಿಕೊಂಡು ಬೋರ್ ಹಾಕಿಸಿಕೊಂಡು ಸ್ವಾಧೀನದಲ್ಲಿದ್ದಾರೆಂದರೆ ಸರಿ. ಅದರಂತೆ 1ನೇ ಪ್ರತಿವಾದಿಗೆ ಬಂದ 1 ಎಕರೆ ಜಮೀನನ್ನು ಅವರು 2ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು ಸದರಿ 2ನೇ ಪ್ರತಿವಾದಿಯು ವ್ಯವಸಾಯ ಮಾಡಿಕೊಂಡು ಸ್ವಾಧೀನದಲ್ಲಿದ್ದಾರೆಂದರೆ ಸರಿ.

4. ದಾವಾ ಸ್ವತ್ತಿನ ಸರ್ವೆ ನಂಬರ್ ಹೇಳಲಾಗುವುದಿಲ್ಲ. ಸರ್ವೆ ನಂ.81/5 ಯಶೋಧಮ್ಮರವರಿಗೆ ಸೇರಿದ್ದು ಅದು ವಾದಿಗೆ ಸೇರಿರುವ ಆಸ್ತಿಯಲ್ಲ. ಸದರಿ ಸರ್ವೆ ನಂಬರ್ ಗಳ ಪಶ್ಚಿಮ ದಿಕ್ಕಿನಲ್ಲಿ ಕಾಲುದಾರಿ ಇದೆ ಎಂಬುದಾಗಿ ನಾನು ಹೇಳಿದ್ದು ಈ ಸಂಬಂಧ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ ಆದರೆ ಮುಂಚಿನಿಂದಲೂ ಅಲ್ಲಿ ವ್ಯವಸಾಯಕ್ಕೆ ಹೋಗುತ್ತಿದ್ದೇವು ಎಂದು ನುಡಿಯುತ್ತಾರೆ. ಹುಣಸನಹಳ್ಳಿ ಕೋಡಿಹಳ್ಳಿ ರಸ್ತೆ ಕಡೆಯಿಂದ ಜಮೀನುಗಳಿಗೆ ಸಾಗಲು ಕಾಲು ದಾರಿ ಇದೆ ಎಂಬುದಾಗಿ ತೋರಿಸಲು ಯಾವುದೇ ದಾಖಲೆ ಇಲ್ಲ. ಸದರಿ ಸ್ಥಳದಲ್ಲಿ ಯಾವುದೇ ಕಾಲುದಾರಿ ಇಲ್ಲ ಎಂದರೆ ಸರಿಯಲ್ಲ. ಹಳೇ ಕಾಲದಿಂದಲೂ ಸಹ ಅಲ್ಲಿ ಕಾಲುದಾರಿ ಇತ್ತು ಎತ್ತಿನಗಾಡಿ ಟ್ರಾಕ್ಟರ್ ಓಡಾಡುತ್ತಿತ್ತು ಎಂದು ನಾನು ಹೇಳಿದ್ದು ಆದರೆ ಅಲ್ಲಿ ಯಾವುದೇ ಕಾಲುದಾರಿ ಇಲ್ಲ ಎಂದರೆ ಸರಿಯಲ್ಲ. ವಾದಿಯ ಜಮೀನಿಗೆ ಹೋಗಲು ಸದರಿ ಸರ್ವೆ ನಂಬರ್ ಗಳ ಪಶ್ಚಿಮ ದಿಕ್ಕಿನಲ್ಲಿ

ಯಾವುದೇ ಬಂಡಿದಾರಿ ಅಥವಾ ಕಾಲುದಾರಿ ಇಲ್ಲ ಎಂದರೆ ಸರಿಯಲ್ಲ. ಸುಮಾರು 15 ವರ್ಷಗಳ ಹಿಂದೆ ಪ್ರತಿವಾದಿಗಳು ವಾದಿಗೆ ಕಾಲುದಾರಿಗೆ ಸಂಬಂದಿಸಿದ ಬಗ್ಗೆ ತೊಂರದೆ ಕೊಟ್ಟ ಬಗ್ಗೆ ದೂರನ್ನು ಕೊಟ್ಟಿದ್ದೇವೆ. 2ನೇ ಪ್ರತಿವಾದಿ ಸದರಿ ಆಸ್ತಿಯನ್ನು ಯಾವಾಗ ಖರೀದಿಸಿದರು ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ನಮ್ಮ ಊರಿನಲ್ಲಿ ನಮ್ಮ ಜಮೀನುಗಳ ಹತ್ತಿರ ಹೋಗಲು ವ್ಯವಸಾಯಕ್ಕೆ ಬೇಕಿರುವ ಸಲಕರಣೆಗಳನ್ನು ತೆಗೆದುಕೊಂಡು ಒಬ್ಬರ ಜಮೀನಿನಿಂದ ಒಬ್ಬರ ಜಮೀನಿಗೆ ದಾಟುತ್ತಾ ಹೋಗುತ್ತೇವೆಂದರೆ ಸರಿ. ಅದೇ ರೀತಿ ವಾದಿಯು ಸಹ ಅವರ ಜಮೀನಿಗೆ ಹೋಗುತ್ತಿದ್ದಾರೆಂದರೆ ಸರಿ. ವಾದಿಯು ನನ್ನ ಮಾವನಾಗಿರುವ ಕಾರಣ ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಿತ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆಂದರೆ ಸರಿಯಲ್ಲ. ವಾದಿಯು ತನ್ನ ಜಮೀನಿಗೆ ಕೋಡಿಹಳ್ಳಿ-ಹುಣಸನಹಳ್ಳಿ ಸರ್ಕಾರಿ ರಸ್ತೆಯಿಂದ ಸಾಗಿಕೊಂಡು ವ್ಯವಸಾಯ ಮಾಡುತ್ತಿದ್ದಾರೆಂದರೆ ಸರಿ. ಸರ್ವೆ ನಂ.81/4 ಮತ್ತು 81/3 ವಾದಿಗೆ ಸೇರಿದ ಸ್ವತ್ತುಗಳು ಎಂದರೆ ಸರಿ. ಸದರಿ ಸರ್ವೆ ನಂಬರ್ ಗೆ ಹೋಗಲು ಪ್ರತಿವಾದಿಗಳ ಸರ್ವೆ ನಂಬರ್ ದಾಟಿ ಹೋಗಬೇಕೆಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಿ ಕಾಲುದಾರಿ ಇ ಎಂದು ನುಡಿಯುತ್ತಾರೆ.

5. 15 ವರ್ಷಗಳ ಹಿಂದೆ ನಾವು ಕೊಟ್ಟ ದೂರಿನ ಮೇರೆಗೆ ಯಾವುದೇ ಕೇಸು ದಾಖಲಾಗಿರುವುದಿಲ್ಲ. ನಾನು ಹಾಗೂ ವಾದಿ ಸೇರಿಕೊಂಡು ಪ್ರತಿವಾದಿಗಳಿಗೆ ದಾರಿ ಬಿಡಿ ಎಂದು ತೊಂದರೆ ಕೊಡುತ್ತಿದ್ದೇವೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**